ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

E-Mail: prydirector.edu.sgkar@nic.in

ಸಂಖ್ಯೆ : ಸಿ7(8)ಪ್ರಾಶಿಅ/ಆರ್.ಟಿ.ಇ/ಶುಲ್ಕ ಮರುಪಾವತಿ/2018-19 ದಿನಾಂಕ: 31-12-2018

## : : ಜ್ಞಾಪನ : :

ವಿಷಯ: ಶಿಕ್ಷಣ ಹಕ್ಕು ಕಾಯಿದೆಯಡಿ 2018-19ನೇ ಸಾಲಿನಲ್ಲಿ ಶುಲ್ಕ ಮರು ಪಾವತಿಗಾಗಿ ತಂತ್ರಾಂಶದ ಮೂಲಕ ಬೇಡಿಕೆ ಸಲ್ಲಿಸಲು ಕ್ರಮ ವಹಿಸಲು ಅಂತಿಮ ದಿನಾಂಕವನ್ನು ವಿಸ್ತರಿಸಿರುವ ಬಗ್ಗೆ.

ಉಲ್ಲೇಖ: 1. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ದಿನಾಂಕ:09-11-2018.
2. ಮಾನ್ಯ ಆಯುಕ್ತರ ಆಪ್ತ ಶಾಖೆಯ ಟಿಪ್ಪಣಿ ಸಂಖ್ಯೆ:ಆ.ಆಶಾ. ಆರ್.ಟಿ.ಇ.ಶು.ಮ/2018-19, ದಿನಾಂಕ:30-11-2018
3. ಈ ಕಛೇರಿಯ ಪತ್ರದ ಸಮಸಂಖ್ಯೆ: 12.12.2018

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (3) ರಲ್ಲಿ 2018-19 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆ ಅಡಿ ದಾಖಲಾದ ವಿದ್ಯಾರ್ಥಿಗಳ ಶುಲ್ಕ ಮರುಪಾವತಿಗಾಗಿ ತಂತ್ರಾಂಶದ ಮೂಲಕ ಬೇಡಿಕೆ ಸಲ್ಲಿಸಲು ಅಂತಿಮ ದಿನಾಂಕ:31.12.2018 ಎಂದು ನಿಗದಿಪಡಿಸಲಾಗಿತ್ತು.

ತಂತ್ರಾಂಶದಲ್ಲಿ ವರದಿಯನ್ನು ಪರಿಶೀಲಿಸಿದಾಗ ಬಹುತೇಕ ಶಾಲೆಗಳು ನಿಗಧಿತ ಸಮಯದೊಳಗೆ ಬಿಲ್ಲುಗಳನ್ನು ಅಪ್‌ಲೋಡ್ ಮಾಡಿಲ್ಲವಾದ್ದರಿಂದ ಕೊನೆಯ ದಿನಾಂಕವನ್ನು ದಿ: 10.01.2019 ರವರೆಗೆ ವಿಸ್ತರಿಸಲಾಗಿದೆ. ಆದುದರಿಂದ ಉಪನಿರ್ದೇಶಕರುಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಆನ್‌ಲೈನ್ ಮೂಲಕ ಇನ್ನು ಬೇಡಿಕೆ ಸಲ್ಲಿಸದಿರುವ ಶಾಲಾ ಮುಖ್ಯಸ್ಥರಿಗೆ ಕೂಡಲೇ ಬೇಡಿಕೆ ಸಲ್ಲಿಸಲು ತಿಳಿಸುವುದು.

ತಂತ್ರಾಂಶದ ವರದಿಗಳನ್ನು ಪರಿಶೀಲಿಸಿದಾಗ ಶಾಲಾ ಹಂತದಿಂದ ಬಂದ ಬೇಡಿಕೆಗಳು ಬಿ.ಇ.ಓ. ಮತ್ತು ಉಪನಿರ್ದೇಶಕರ ಹಂತದಲ್ಲಿ ಬಾಕಿ ಇರುವುದು ಗಮನಕ್ಕೆ ಬಂದಿದೆ. ಆದ್ದರಿಂದ ಈಗಾಗಲೇ ಶಾಲಾ ಹಂತದಿಂದ ಬೇಡಿಕೆ ಸಲ್ಲಿಸಿದ ಶಾಲೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪನಿರ್ದೇಶಕರುಗಳ ಹಂತದಲ್ಲಿ ಪರಿಶೀಲಿಸಿ ಆಯುಕ್ತರ ಅನುಮೋದನೆಗಾಗಿ ಕೂಡಲೇ ಸಲ್ಲಿಸುವುದು.

( ಆಯುಕ್ತರ ಆದೇಶದ ಮೇರೆಗೆ)

(ಜಯಕುಮಾರ್.ಎಸ್)
ನಿರ್ದೇಶಕರು, ಪ್ರಾಥಮಿಕ ಶಿಕ್ಷಣ
31/12 31/12

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುತ್ತಾ ತುರ್ತು ಕ್ರಮ ವಹಿಸಲು ತಿಳಿಸಿದೆ.
2. ರಾಜ್ಯದ ಎಲ್ಲಾ ತಾಲ್ಲೂಕು / ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಖಾಸಗಿ ಶಾಲಾ ಮುಖ್ಯಸ್ಥರು / ಆಡಳಿತ ಮಂಡಳಿಯವರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ

ಪ್ರತಿಯನ್ನು:

4. ಆಯುಕ್ತರ ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಕಛೇರಿ ಸಾ.ಶಿ.ಇ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರಲಾಗಿದೆ.

5. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾ.ಶಿ.ಇ ಇವರಿಗೆ ಕಳುಹಿಸುತ್ತಾ ಶಾಲಾ ಹಂತದಲ್ಲಿ ತಾಂತ್ರಿಕ ಸಮಸ್ಯೆಗಳ ಬಗ್ಗೆ ಇಮೇಲ್, ಪತ್ರಗಳ ಮುಖಾಂತರ ಬಂದಿರುವ ದೂರುಗಳ ಬಗ್ಗೆ ತುರ್ತಾಗಿ ಕ್ರಮವಹಿಸುವುದು ಅಲ್ಲದೇ ಎಸ್.ಎ.ಟಿ.ಎಸ್ ಮುಖಾಂತರ ಅರ್.ಟಿ.ಇ ಮಕ್ಕಳ ವಿವರಗಳನ್ನು ಪಡೆದು ಅಪ್‌ಡೇಟ್‌ಗೊಳಿಸಲು ತುರ್ತು ಕ್ರಮವಹಿಸುವುದು.
6. ಹಿರಿಯ ಸಹಾಯಕ ನಿರ್ದೇಶಕರು/ ಪ್ರೋಗ್ರಾಮರ್ಸ್, ಎಸ್.ಎ.ಟಿ.ಎಸ್. ವಿಭಾಗ, ಎಸ್.ಎಸ್.ಎ. ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7. ಕಛೇರಿ ಪ್ರತಿ.